ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
[ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.]
ಅಧೀಕ್ಷಕ ಇಂಜಿನೀಯರ (ವಿ) ರವರ ಕಛೇರಿ,
ಕಾರ್ಯ ಮತ್ತು ಪಾಲನಾ ವೃತ್ತ,
ಬಿಲ್ಡಿಂಗ್ # 258/2, ಅಯ್ಯಪ್ಪ ನಗರ
ಹುಬ್ಬಳ್ಳಿ ರಸ್ತೆ, ಶಿರಸಿ [ಉ.ಕ] – 581 402

HUBLI ELECTRICITY SUPPLY COMPANY LIMITED
[Wholly owned Govt. of Karnataka undertaking]
Office of the,
Superintending Engineer (Ele),
O & M Circle,
Building #258/2, Ayyappa Nagar,
Hubli Road, Sirsi [U.K] - 581 402.

Tel: 08384-236968, Fax: 08384-236777, E-mail ID: seesrs.hescom@gmail.com
Corporate Identity Number (CIN) : U31401KA2002SGC030437

# ಪ್ರಕಟಣೆ [Notification]

ವಿಷಯ: **"ಮೈಕ್ರೋ ಫೀಡರ್ ಫ್ರಾಂಚೈಸಿ"** ರವರನ್ನು ಗೊತ್ತುಮಾಡುವ ಕುರಿತು.

****

ಕಾರ್ಯ ಮತ್ತು ಪಾಲನಾ ವೃತ್ತ, ಹೆಸ್ಕಾಂ, ಶಿರಸಿ ವೃತ್ತ ವ್ಯಾಪ್ತಿಯಲ್ಲಿ ಬರುವ **ಯಲ್ಲಾಪುರ, ದಾಂಡೇಲಿ ಮತ್ತು ಹಳಿಯಾಳ ತಾಲೂಕಿನ ಗ್ರಾಮ ಪಂಚಾಯತಗಳಿಗೆ "ಮೈಕ್ರೋ ಫೀಡರ್ ಫ್ರಾಂಚೈಸಿ"** ರವರನ್ನು ಹುವಿಸಕಂನಿಯು **ಪ್ರೋತ್ಸಾಹ ಧನ [Incentive]** ಆಧಾರದ ಮೇಲೆ ಗೊತ್ತು ಮಾಡುವುದಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. **"ಮೈಕ್ರೋ ಫೀಡರ್ ಫ್ರಾಂಚೈಸಿ"** ಯು ಪ್ರತಿ ತಿಂಗಳಿಗೆ ಗ್ರಾಹಕರ ಮಾಪಕಗಳನ್ನು ಓದಿ ಶೇಕಡಾ 100 ರಷ್ಟು ಬಿಲ್ ವಿತರಣೆ ಮಾಡಿ, ಹುವಿಸಕಂನಿಯು ನಿಗದಿಪಡಿಸಿರುವ ಮಾಸಿಕ ಮೂಲ ಗುರಿಯನ್ನು ಸಾಧಿಸಿದಲ್ಲಿ **ರೂ. 12000.00** (ರೂ. ಹನ್ನೆರಡು ಸಾವಿರ ಮಾತ್ರ) ವನ್ನು **"ಕನಿಷ್ಟ ಖಚಿತ ಪ್ರೋತ್ಸಾಹ ಧನ"** ವಾಗಿ ನೀಡಲಾಗುವುದು. **"ಮೈಕ್ರೋ ಫೀಡರ್ ಫ್ರಾಂಚೈಸಿ"** ಗಳ ಕಾರ್ಯನಿರ್ವಹಣೆಯ ಆಧಾರದ ಮೇಲೆ ಸಂಭಾವನೆ ನೀಡಲಾಗುವುದು.

**ಮೈಕ್ರೋ ಫೀಡರ್ ಫ್ರಾಂಚೈಸಿ ಸ್ಥಾನಗಳು ಖಾಲಿ ಇರುವ ಗ್ರಾಮ ಪಂಚಾಯತಿಗಳ ವಿವರ.**

| ಕ್ರ.ಸಂ. | ವಿಭಾಗ | ಉಪವಿಭಾಗದ ಹೆಸರು | ಗ್ರಾಮ ಪಂಚಾಯತಿಯ ಹೆಸರು | ಎಮ್. ಎಫ್. ಎಫ್. ಸಂಖ್ಯೆ |
|---|---|---|---|---|
| 1 | ಶಿರಸಿ | ಯಲ್ಲಾಪುರ | ಕಣ್ಣಿಗೇರಿ | 1 |
| 2 | | | ಮದನೂರು(ಹುಣಸೆಟ್ಟಿಕೊಪ್ಪ) | 1 |
| 3 | | | ನಂದೊಳ್ಳಿ | 1 |
| 4 | ದಾಂಡೇಲಿ | ದಾಂಡೇಲಿ | ನಾಗೋಡಾ | 1 |
| 5 | | ಹಳಿಯಾಳ | ತಟ್ಟಿಗೇರಾ | 1 |
| 6 | | | ಮೊದಲಗೇರಾ | 1 |

## I. ಅರ್ಹತೆ :-

1. ಮೈಕ್ರೋ ಫೀಡರ್ ಫ್ರಾಂಚೈಸಿ ಗಾಗಿ ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಸಂಬಂಧಿಸಿದ ಆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ವಾಸ ಸ್ಥಳದ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿಯ ಅಧಿಕೃತ ಅಧಿಕಾರಿಯಿಂದ ಪಡೆದಿರಬೇಕು.
2. ಒಂದು ವೇಳೆ ಯೋಗ್ಯ ಅಭ್ಯರ್ಥಿಯು ಅದೇ ಗ್ರಾಮ ಪಂಚಾಯತಿಯಲ್ಲಿ ದೊರಕದಿದ್ದರೆ ಆ ಗ್ರಾಮ ಪಂಚಾಯತಿಗೆ, ಪಂಚಾಯತಿಯ ಅಧ್ಯಕ್ಷರ ಅನುಮೋದನೆಯ ಮೇರೆಗೆ ಬೇರೊಂದು ಪಂಚಾಯತಿಯ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗುವುದು.

**3. ಅಭ್ಯರ್ಥಿಯ ಕನಿಷ್ಟ ವಿದ್ಯಾರ್ಹತೆ:**

**ಪಿ.ಯು.ಸಿ. ದ್ವಿತಿಯ ವರ್ಷ ಪಾಸಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.**

a) ದ್ವಿತೀಯ ಪಿ.ಯು.ಸಿಯಲ್ಲಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳ ಮೆರಿಟ್ ಆಧಾರದ ಮೇಲೆ ನೇಮಕಾತಿ ಮಾಡಲಾಗುವುದು.

b) ತತ್ಸಮಾನ ವಿದ್ಯಾರ್ಹತೆಯನ್ನು ದ್ವಿತೀಯ ಪಿ.ಯು.ಸಿಗೆ ತತ್ಸಮಾನ ವಿದ್ಯಾರ್ಹತೆ ಎಂದು ಪರಿಗಣಿಸುವ ಕುರಿತು ಸಕ್ಷಮ ಪ್ರಾಧಿಕಾರದಿಂದ ದೃಢೀಕರಿಸಿದ ಪತ್ರ ಅಥವಾ ಸರಕಾರಿ ಆದೇಶದ ಪ್ರತಿಯನ್ನು ಅರ್ಜಿದಾರರು ಸಲ್ಲಿಸತಕ್ಕದ್ದು.

c) ಬಾಹ್ಯವಾಗಿ ಪಡೆದಿರುವ ವಿದ್ಯಾರ್ಹತೆಯನ್ನು ಪರಿಗಣಿಸಲಾಗುವುದಿಲ್ಲಾ.

4. ಅಭ್ಯರ್ಥಿಯು ದಿನಾಂಕ 16.08.2021 ಕ್ಕೆ 18 ರಿಂದ 40 ವಯಸ್ಸಿನ ವಯೋಮಿತಿಯಲ್ಲಿರಬೇಕು.

5. **ದಿನನಿತ್ಯ ವಸೂಲು ಮಾಡುತ್ತಿರುವ ಕಂದಾಯ ವಸೂಲಾತಿ ಪ್ರಮಾಣವನ್ನು ಆಧರಿಸಿ, ಬ್ಯಾಂಕ್ ಖಾತರಿ ಹಣವನ್ನು ಕನಿಷ್ಠ ರೂ. 50,000.00 (ರೂ. ಐವತ್ತು ಸಾವಿರ ಮಾತ್ರ) ಅಥವಾ ಗರಿಷ್ಟ 5 ದಿನಗಳ ತಿಂಗಳಿನ ನಿತ್ಯ ಸರಾಸರಿ ಕಂದಾಯ ವಸೂಲಾತಿ ಪ್ರಮಾಣ, ಇವೆರಡರಲ್ಲಿ ಯಾವುದು ಹೆಚ್ಚಿರುವುದೋ, ಅದಕ್ಕೆ ಸಮನಾಗಿ ಬ್ಯಾಂಕ್ ಖಾತರಿ ಹಣವನ್ನು ನೀಡಬೇಕು.**

**(a)** ಸದರಿ ಬ್ಯಾಂಕ್ ಗ್ಯಾರಂಟಿಯು 12+3=15 ತಿಂಗಳ ಅವಧಿಗೆ ಊರ್ಜಿತದಲ್ಲಿರತಕ್ಕದ್ದು. ಸದರಿ ಬ್ಯಾಂಕ್ ಖಾತರಿಯನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ಅವಶ್ಯಕತೆಯಂತೆ ವಿಸ್ತರಿಸಬಹುದಾಗಿದೆ.

**(b)** ಬ್ಯಾಂಕ್ ಖಾತ್ರಿಯನ್ನು / ವಸೂಲಾದ ಹಣವನ್ನು ದುರುಪಯೋಗ ಪಡಿಸಿಕೊಂಡಲ್ಲಿ ಎಂ.ಎಫ್.ಎಫ್ ರವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೊರಡಿಸಲಾಗುವುದು.

**6.** ಮೈಕ್ರೋ ಫೀಡರ್ ಫ್ರಾಂಚೈಸಿ ರವರುಗಳು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಮತ್ತು ಮೈಕ್ರೋ ಫೀಡರ್ ಪ್ರಾಂಚೈಸಿ ನಡುವಿನ ಒಪ್ಪಂದದ ನಿವೇದನೆ ಪತ್ರದಲ್ಲಿನ ಷರತ್ತು / ಒಪ್ಪಂದಗಳ ಪ್ರಕಾರ ಕರ್ತವ್ಯ ನಿರ್ವಹಿಸತಕ್ಕದ್ದು. **[ಒಪ್ಪಂದದ ನಿವೇದನ ಪತ್ರ ಲಗತ್ತಿಸಿದೆ.].**

**7.** ಕಂಪನಿ ಕಚೇರಿಯ ಪತ್ರ ಸಂ. ಹುವಿಸಕಂನಿ/ಆ.ಸ/ಉಲೆನಿ(ಕಂ)/BZ&HZ/11-12/Cys-1522 ದಿನಾಂಕ: 15.11.2011 ರಲ್ಲಿ ಮಾಸಿಕ ರೂ. 1.00 (ಒಂದು) ಲಕ್ಷಕ್ಕಿಂತಲೂ ಹೆಚ್ಚು ಬೇಡಿಕೆಯಾಗುವ ಗ್ರಾಮ ಪಂಚಾಯಿತಿಗಳ ಯಾದಿಯನ್ನು ತಯಾರಿಸಿ ಅದರಲ್ಲಿ ಅತೀ ಹೆಚ್ಚು ಬೇಡಿಕೆಯುಳ್ಳ ಶೇ. 20 ರಷ್ಟು ಗ್ರಾಮ ಪಂಚಾಯತಿಗಳ ಮೀಟರ್ ರೀಡಿಂಗ್ ಮತ್ತು ವಸೂಲಾತಿ ಕಾರ್ಯವನ್ನು ಕಂಪನಿ ಸಿಬ್ಬಂದಿಗಳಿಂದ ನಿರ್ವಹಿಸಬೇಕಾಗಿರುವುದರಿಂದ ಸದರ ಎಂ.ಎಫ್.ಎಫ್ ರವರ ಮೇಲೆ ಯಾವುದೇ ದೂರುಗಳು ಇಲ್ಲದಿದ್ಯಾಗ್ಯೂ ಒಂದು ವೇಳೆ ವಜಾಗೊಳಿಸಿದ್ದಲ್ಲಿ ಅವರಿಗೂ ಸಹ ಅವರವರ ಜಿಲ್ಲೆಯ ವ್ಯಾಪ್ತಿಯಲ್ಲಿ ಜರುಗುವ ಈ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದು.

**8.** ಮೈಕ್ರೋ ಫೀಡರ್ ಫ್ರಾಂಚೈಸಿರವರುಗಳು ಯಾವುದೇ ಸರಕಾರಿ/ ಅರೆಸರ್ಕಾರಿ/ ಸ್ಥಳೀಯ ಸಂಸ್ಥೆ / ರಾಜಕೀಯ ಸಂಸ್ಥೆಗಳಲ್ಲಿ ಹುದ್ದೆ / ಸ್ಥಾನ ಹೊಂದಿರತಕ್ಕದಲ್ಲ.

## II. ಆಯ್ಕೆ ಸಮಿತಿಯ ಸದಸ್ಯರು :-

**"ಮೈಕ್ರೋ ಫೀಡರ್ ಫ್ರಾಂಚೈಸಿ"** ಯ ಆಯ್ಕೆ ಸಮಿತಿಯಲ್ಲಿ ಆಯಾ ವೃತ್ತದ ಅಧೀಕ್ಷಕ ಅಭಿಯಂತರರು[ವಿ], ಉಪಲೆಕ್ಕನಿಯಂತ್ರಣಾಧಿಕಾರಿಗಳು, ವಿಭಾಗಗಳ ಕಾರ್ಯನಿರ್ವಾಹಕ ಅಭಿಯಂತರರು[ವಿ], ಲೆಕ್ಕಾಧಿಕಾರಿಗಳು ಮತ್ತು ಉಪವಿಭಾಗಗಳ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು[ವಿ] ಮತ್ತು ಹು.ವಿ.ಸ.ಕಂಪನಿ ಅಧಿಕಾರಿ ಪ್ರತಿನಿಧಿಗಳು ಇರುತ್ತಾರೆ.

## III. ಮೈಕ್ರೋ ಫೀಡರ ಫ್ರಾಂಚೈಸಿಗಳ ಕಾನೂನುಬದ್ಧ ಸ್ಥಾನಮಾನ:

1. ಮೈಕ್ರೋ ಫೀಡರ್ ಫ್ರಾಂಚೈಸಿ ಆಗಿ ಕಾರ್ಯನಿರ್ವಹಿಸುವ ವ್ಯಕ್ತಿಯು ಹುವಿಸಕಂನಿಯ ಒಬ್ಬ ಏಜೆಂಟ್ ಆಗಿ ತನ್ನ ಕಾರ್ಯವ್ಯಾಪ್ತಿ ಪ್ರದೇಶದಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ. ಮತ್ತು ಯಾವುದೇ ಕಾರಣಕ್ಕೂ ಆತನನ್ನು ಹುವಿಸಕಂಪನಿಯ ನೌಕರನೆಂದು ಪರಿಗಣಿಸಲಾಗುವುದಿಲ್ಲಾ.
2. ಮೈಕ್ರೋ ಫೀಡರ್ ಫ್ರಾಂಚೈಸಿ ಆಗಿ ಕಾರ್ಯನಿರ್ವಹಿಸುವ ವ್ಯಕ್ತಿಯು, ತನಗೆ ವಹಿಸಿರುವ ಕಾರ್ಯ ವ್ಯಾಪ್ತಿಯಲ್ಲಿ ತನ್ನ ಕಾರ್ಯನಿರ್ವಹಣೆಗಾಗಿ ತನ್ನ ಅಧೀನದಲ್ಲಿ ಉಪ ಏಜೆಂಟ್/ ಡೀಲರ್‌ರನ್ನು ನೇಮಕ ಮಾಡಿಕೊಳ್ಳುವಂತಿಲ್ಲ.

## IV. ಆಯ್ಕೆಯ ಪ್ರಕ್ರಿಯೆ :-

"ಮೈಕ್ರೋ ಫೀಡರ್ ಫ್ರಾಂಚೈಸಿ" ಗಾಗಿ ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಪಿ.ಯು.ಸಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರತಕ್ಕದ್ದು ಹಾಗೂ ಸದರಿಯವರನ್ನು ಮೆರಿಟ್ ಆಧಾರದ ಮೇಲೆ ಗೊತ್ತು ಮಾಡಿಕೊಳ್ಳಲಾಗುವುದು. ಪಿ.ಯು.ಸಿ ತತ್ಸಮಾನ ವಿದ್ಯಾರ್ಹತೆ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪ್ರಮಾಣ ಪತ್ರವನ್ನು ಪಡೆದಿರಬೇಕು.

## V. ಮೈಕ್ರೋ ಫೀಡರ್ ಫ್ರಾಂಚೈಸಿಯ ಜವಾಬ್ದಾರಿಗಳು:-

1. ಎಲ್.ಟಿ-1, ಎಲ್.ಟಿ-2, ಎಲ್.ಟಿ-3, ಎಲ್.ಟಿ-4 (10 ಹೆಚ್.ಪಿ ಗಿಂತ ಮೇಲ್ಪಟ್ಟ ಸ್ಥಾವರಗಳು), ಎಲ್.ಟಿ-5(40 ಹೆಚ್.ಪಿ ಸಾಮರ್ಥ್ಯದವರೆಗೆ) ಮತ್ತು ಎಲ್.ಟಿ-6 ಪ್ರವರ್ಗದ ಸ್ಥಾವರಗಳ ಮಾಪಕ ಓದುವಿಕೆ, ಬಿಲ್ ವಿತರಣೆ ಮತ್ತು ಕಂದಾಯ ವಸೂಲಾತಿ ಮಾಡುವುದು.
2. ಗ್ರಾಹಕರಿಂದ ವಸೂಲು ಮಾಡಿದ ಹಣವನ್ನು ಅದೇ ದಿನ ಅಥವಾ ನಂತರದ ತಕ್ಷಣದ ಕೆಲಸದ ದಿನಾಂಕದಂದು ನಿಗದಿಪಡಿಸಿರುವ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಕಛೇರಿ ಅಥವಾ ನಿಯುಕ್ತಿಗೊಳಿಸಿರುವ ಬ್ಯಾಂಕನಲ್ಲಿ ಸಂದಾಯ ಮಾಡತಕ್ಕದ್ದು.
3. ದಿನವಹಿ ಮಾಪಕ ಓದುವಿಕೆಯನ್ನು ಪ್ರತಿ ತಿಂಗಳ 15ನೇ ದಿನಾಂಕದೊಳಗೆ ಪೂರ್ಣಗೊಳಿಸಬೇಕು ಹಾಗೂ ಮಾಪಕ ಓದಿದ ಸ್ಥಾವರಗಳ ವಿವಿರಗಳನ್ನು ಅದೇ ದಿನ ಸಿಸ್ಟಮ್ ಗೆ ಗಣಕಯಂತ್ರ (Computer) ನಲ್ಲಿ ಮಾಡಬೇಕು.
4. ಎಂ.ಎಫ್.ಎಫ್ ರವರು ತಾವು ನಿಯಮಿತವಾಗಿ ಮಾಡುವ ಮಾಪಕ ಓದುವಿಕೆ, ಬಿಲ್ ವಿತರಣೆ ಮತ್ತು ಕಂದಾಯ ವಸೂಲಾತಿ ಕಾರ್ಯಗಳಿಗೆ ಯಾವುದೇ ತೊಂದರೆ / ಅಡ್ಡಿಯಿಲ್ಲದ ರೀತಿಯಲ್ಲಿ ಗ್ರಾಹಕರ ಸ್ಥಾವರಗಳು, ಫೀಡರಗಳು ಮತ್ತು ವಿತರಣಾ ಪರಿವರ್ತಕಗಳಿಗೆ ಮಾಪಕ ಅಳವಡಿಕೆ, ವಿತರಣಾ ಪರಿವರ್ತಕಗಳ ಮಾಪಕ ಓದುವಿಕೆ, ಗ್ರಾಹಕ ಸೂಚ್ಯಂಕ ಹಾಗೂ ಗ್ರಾಹಕರ ಸ್ಥಾವರಗಳಿಗೆ ವಿದ್ಯುತ್ ನಿಲುಗಡೆ ಮಾಡುವ ಕಾರ್ಯದಲ್ಲಿ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ ಸಹಕರಿಸುವುದು.
5. ವಿದ್ಯುತ್ ಸರಬರಾಜು ಸಂಬಂಧಿತ ದೂರುಗಳಿದ್ದಲ್ಲಿ, ಗ್ರಾಹಕರಿಗೆ ಸೇವಾ ಕೇಂದ್ರದ ದೂರವಾಣಿ ಸಂಖ್ಯೆಯನ್ನು ನೀಡುವುದು.
6. ಅನಧಿಕೃತ ವಿದ್ಯುತ್ ಸಂಪರ್ಕವನ್ನು ಸಕ್ರಮಗೊಳಿಸಲು ಸಹಕರಿಸುವುದು.
7. ಅಪಾಯಕಾರಿ ಸ್ಥಾವರಗಳ ಸ್ಥಳಗಳನ್ನು ಪತ್ತೆ ಹಚ್ಚಲು ಸಹಕರಿಸುವುದು.
8. ಹಳೆಯ/ ಹಾಳಾಗಿರುವ (MNR) ಮಾಪಕಗಳನ್ನು ಗುರುತಿಸಿ, ಉತ್ತಮ ಮಾಪಕಗಳಿಗೆ ಬದಲಾಯಿಸಲು ಅನುಕೂಲವಾಗುವಂತೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸುವುದು.

9. ಬೀದಿ ದೀಪ ಮತ್ತು ಎಲ್.ಟಿ ಪ್ರವರ್ಗದ ನೀರು ಸರಬರಾಜು ಸ್ಥಾವರಗಳ ಮಾಪಕ ಓದುವುದು ಹಾಗೂ ಬಿಲ್ ವಿತರಿಸುವುದು.

10. ಬೀದಿ ದೀಪ ನೀರು ಸರಬರಾಜು ಹಾಗೂ ನೀರಾವರಿ ಪಂಪ್‌ಸೆಟಗಳಿಗೆಂದೇ ಮೀಸಲಿಟ್ಟ ವಿತರಣಾ ಪರಿವರ್ತಕಗಳ ಮಾಪಕಗಳ ಓದುವಿಕೆ ಹಾಗೂ ಮಾಪಕ ಓದುವಿಕೆಯಲ್ಲಿ ಯಾವುದೇ ವ್ಯತ್ಯಾಸಗಳು ಕಂಡುಬಂದಲ್ಲಿ ವರದಿಯನ್ನು ಉಪವಿಭಾಗ ಕಛೇರಿಗೆ ವರದಿ ಮಾಡುವುದು.

11. ಮೈಕ್ರೋ ಫೀಡರ್ ಫ್ರಾಂಚೈಸಿಗಳು, ತಮಗೆ ಒದಗಿಸಿರುವ ಗುರುತು ಪಟ್ಟಿ / ಬ್ಯಾಡ್ಜ ಧರಿಸಿ ಕಂಪನಿಯ ಕರ್ತವ್ಯ ನಿರ್ವಹಿಸತಕ್ಕದ್ದು ಈ ಗುರುತು ಪಟ್ಟಿ / ಬ್ಯಾಡ್ಜನ್ನು ಸುಸ್ಥಿತಿಯಲ್ಲಿ ಇರಿಸಿಕೊಳ್ಳತಕ್ಕದ್ದು. ಈ ನಿಟ್ಟಿನಲ್ಲಿ ಒದಗಿಸಿರುವ ಅವಕಾಶಗಳನ್ನು ಮೈಕ್ರೋ ಫೀಡರ್ ಫ್ರಾಂಚೈಸಿಗಳು ದುರುಪಯೋಗಪಡಿಸಿಕೊಳ್ಳತಕ್ಕದ್ದಲ್ಲ.

12. ಯಾವುದೇ ಕಾರಣಕ್ಕೆ ಸ್ಥಾವರದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿದಾಗ ಅಂತಹ ಸ್ಥಾವರದ ಮಾಪಕದಲ್ಲಿ ದಾಖಲಾಗಿರುವ ಅಂತಿಮ ರೀಡಿಂಗನ್ನು ಆರ್. ಆರ್. ಸಂಖ್ಯೆ ಅನುಸಾರ ದಾಖಲಿಸಿಕೊಂಡು, ಹುವಿಸಂಕನಿಯು ನಿಗದಿಪಡಿರುವ ನಮೂನೆಯ ಪ್ರಕಾರ ಮಾಹಿತಿಯನ್ನು ಸಲ್ಲಿಸುವುದು.

13. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯು ಕಾಲ-ಕಾಲಕ್ಕೆ ಪ್ರಕಟಿಸುವ ವಿದ್ಯುತ್ ಸುರಕ್ಷತಾ ವಿಧಾನಗಳ ಕುರಿತು ಸಾಮಾನ್ಯ ಜನತೆಗೆ ಅರಿವು ಮೂಡಿಸುವುದು.

14. ಹೊಸ ವಿದ್ಯುತ್ ಸಂಪರ್ಕ ಪಡೆಯಲು ಇಚ್ಛಿಸುವ ಸಾರ್ವಜನಿಕರಿಗೆ ಸೂಕ್ತ ಸಹಾಯ/ಮಾರ್ಗದರ್ಶನ ನೀಡಿ, ವಿದ್ಯುತ್ ಸಂಪರ್ಕ ಪಡೆಯಲು ಅನುಸರಿಸಬೇಕಾದ ಕಂಪನಿಯ ನಿಯಮಗಳ ಬಗ್ಗೆ ಮಾಹಿತಿ ನೀಡುವುದು.

15. ಹುವಿಸಕಂನಿಯು ಪ್ರತಿ ಮೈಕ್ರೋ ಫೀಡರ್ ಫ್ರಾಂಚೈಸಿಗಳಿಗೆ ಒಂದು ಅಂಡ್ರಾಯ್ಡ್ ಸ್ಮಾರ್ಟ ಪೋನ್/ಸ್ಮಾಟ್ ಬಿಲ್ಲಿಂಗ್ ಮಷೀನ್(ಎಸ್.ಬಿ.ಎಂ)/Optical port cable ನ್ನು ಒದಗಿಸುವುದು. ಅಂಡ್ರಾಯ್ಡ್ ಸ್ಮಾರ್ಟ ಪೋನ್/ಸ್ಮಾಟ್ ಬಿಲ್ಲಿಂಗ್ ಮಷೀನನ್ನು Optical port cable ನ್ನು ನಿರ್ವಹಿಸುವಲ್ಲಿ ಯಾವುದೇ ನಿರ್ಲಕ್ಷತೆ ತೋರಿ, ಕಳೆದು ಹೋದಲ್ಲಿ/ನಿಷ್ಕ್ರೀಯವಾದಲ್ಲಿ ಸಂಪೂರ್ಣ ವೆಚ್ಚ/ದುರಸ್ಥಿ ವೆಚ್ಚವನ್ನು ಸಂಬಂಧಪಟ್ಟ ಮೈಕ್ರೋ ಫೀಡರ್ ಫ್ರಾಂಚೈಸಿ ಭರಿಸಬೇಕು.

16. ಮೈಕ್ರೋ ಫೀಡರ್ ಫ್ರಾಂಚೈಸಿ ಆಗಿ ಕಾರ್ಯನಿರ್ವಹಿಸುವ ವ್ಯಕ್ತಿಯು ತನಗೆ ವಹಿಸಿರುವ ಕಾರ್ಯ ವ್ಯಾಪ್ತಿಯಲ್ಲಿ ತನ್ನ ಕಾರ್ಯನಿರ್ವಹಣೆಗಾಗಿ ತನ್ನ ಅಧೀನದಲ್ಲಿ ಉಪ ಏಜೆಂಟ್/ಡೀಲರ್‌ಗಳನ್ನು ನೇಮಕ ಮಾಡಿಕೊಳ್ಳುವಂತಿಲ್ಲ. ಈ ರೀತಿಯ ನೇಮಕಾತಿ ಮಾಡಿರುವುದು ಗಮನಕ್ಕೆ ಬಂದಲ್ಲಿ ಎಂ.ಎಫ್.ಎಫ್ ರವರನ್ನು ಯಾವುದೇ ನೋಟೀಸ್ ನೀಡದೇ ಅವರ ನೇಮಕಾತಿಯನ್ನು ರದ್ದು ಪಡಿಸಲಾಗುವುದು.

17. ಮೈಕ್ರೋ ಫೀಡರ್ ಫ್ರಾಂಚೈಸಿ ರವರುಗಳು ಯಾವುದೇ ಸರ್ಕಾರಿ/ಅರೆ ಸರ್ಕಾರಿ/ಸ್ಥಳೀಯ ಸಂಸ್ಥೆ/ರಾಜಕೀಯ ಸಂಸ್ಥೆಗಳಲ್ಲಿ ಯಾವುದೇ ಹುದ್ದೆ/ಸ್ಥಾನ ಹೊಂದಿರತಕ್ಕದ್ದಲ್ಲ.

18. ಮಾಸಿಕ ಮೂಲ ವಸೂಲಾತಿ ಗುರಿ **(Monthly Baseline collection target)**:-

- ಎಲ್.ಟಿ-1 (40 ಯೂನಿಟ್‌ಗಳಿಗೆ ಮೇಲ್ಪಟ್ಟ ಸ್ಥಾವರಗಳು) ಹಾಗೂ ಎಲ್.ಟಿ-4 ಪ್ರವರ್ಗದ ಸ್ಥಾವರಗಳ ಶೇಕಡಾ 50 ರಷ್ಟು ಮಾಸಿಕ ಬೇಡಿಕೆ.
- ಎಲ್.ಟಿ-2, ಎಲ್.ಟಿ-3 ಹಾಗೂ ಎಲ್.ಟಿ-5(40 ಹೆಚ್.ಪಿ ಸಾಮರ್ಥ್ಯದವರೆಗೆ) ಸ್ಥಾವರಗಳ ಶೇಕಡಾ 100 ರಷ್ಟು ಮಾಸಿಕ ಬೇಡಿಕೆ.

## V. ಪ್ರೋತ್ಸಾಹ ಧನ:-

1. ಪ್ರತಿ ತಿಂಗಳು ಗೊತ್ತುಪಡಿಸಿದ ಪ್ರವರ್ಗದ ಗ್ರಾಹಕರ ಮಾಪಕಗಳನ್ನು ಓದಿ, ಶೇಕಡಾ 100 ರಷ್ಟು ಬಿಲ್ ವಿತರಣೆ ಮಾಡಿ, ಹುವಿಸಕಂನಿ ನಿಗದಿಪಡಿಸಿರುವ ಮಾಸಿಕ ಮೂಲ ಗುರಿಯನ್ನು ಸಾಧಿಸಿದಲ್ಲಿ ಮೈಕ್ರೋ ಫೀಡರ್ ಪ್ರಾಂಚೈಸಿಗೆ ರೂ. 12,000/- (ರೂ. ಹನ್ನೆರಡು ಸಾವಿರ ರೂಪಾಯಿ ಮಾತ್ರ)ವನ್ನು ಕನಿಷ್ಠ ಖಚಿತ ಪ್ರೋತ್ಸಾಹ ಧನ ವಾಗಿ ನೀಡಲಾಗುವುದು.
2. ಹುವಿಸಕಂನಿಯು ಕಾಲ-ಕಾಲಕ್ಕೆ ನಿಗದಿಪಡಿಸಿದ ಬೇಸ್‌ಲೈನ್ ಗುರಿಯು ವಸೂಲಾತಿ ಸಾಧಿಸಿದಲ್ಲಿ ಹೆಚ್ಚುವರಿ ಪ್ರೋತ್ಸಾಹ ಧನವನ್ನು ಕೆಳಗಿನಂತೆ ಷರತ್ತುಗಳಿಗೆ ಒಳಪಟ್ಟಂತೆ ನೀಡಲಾಗುವುದು.
   - ಅ) ಎಲ್.ಟಿ-1 (40 ಯೂನಿಟ್‌ಗಳಿಗೆ ಮೇಲ್ಪಟ್ಟ ಸ್ಥಾವರಗಳನ್ನು ಹೊರತುಪಡಿಸಿ), ಎಲ್.ಟಿ-2, ಎಲ್.ಟಿ-3, ಎಲ್.ಟ-4 (10 ಹೆಚ್.ಪಿ ಗಿಂತ ಮೇಲ್ಪಟ್ಟ ಸ್ಥಾವರಗಳನ್ನು ಹೊರತುಪಡಿಸಿ), ಎಲ್.ಟಿ-5(40 ಹೆಚ್.ಪಿ ಸಾಮರ್ಥ್ಯದವರೆಗೆ) ಸ್ಥಾವರಗಳ ಪ್ರಸಕ್ತ ತಿಂಗಳಿನ ಬೇಡಿಕೆಯ ಶೇ. 100 ರಷ್ಟು ವಸೂಲಾತಿ ಮಾಡಿದಲ್ಲಿ ಕನಿಷ್ಠ ಖಚಿತ ಪ್ರೋತ್ಸಾಹ ಧನದ ಜೊತೆಗೆ ರೂ.2000/-(ರೂಪಾಯಿ ಎರಡು ಸಾವಿರರಗಳನ್ನು ಮಾತ್ರ)ವನ್ನು ನೀಡಲಾಗುವುದು.
   - ಆ) ಒಪ್ಪಂದದ ಅವಧಿ ಹೊರತುಪಡಿಸಿ, ಹಿಂದಿನ ದೀರ್ಘಾವಧಿ ವಿದ್ಯುತ್ ಕಡಿತಗೊಂಡ ಸ್ಥಾವರಗಳ ಒಟ್ಟು ಬಾಕಿ ಮೊತ್ತದ ಶೇ 50 ರಷ್ಟು ವಸೂಲಿ ಮಾಡಿದಲ್ಲಿ ರೂ.1000/-(ರೂ. ಒಂದು ಸಾವಿರ ರೂಗಳು ಮಾತ್ರ) ವನ್ನು ಹೆಚ್ಚುವರಿ ಪ್ರೋತ್ಸಾಹ ಧನವನ್ನಾಗಿ ನೀಡಲಾಗುವುದು.
   - ಇ) ಒಪ್ಪಂದದ ಅವಧಿ ಹೊರತುಪಡಿಸಿ, ಹಿಂದಿನ ದೀರ್ಘಾವಧಿ ವಿದ್ಯುತ್ ಕಡಿತಗೊಂಡ ಸ್ಥಾವಗಳ ಒಟ್ಟು ಬಾಕಿ ಮೊತ್ತದ ಶೇ 50 ರಿಂದ 100 ರವರೆಗೆ ಹೆಚ್ಚು ಮೊತ್ತವನ್ನು ವಸೂಲಿ ಮಾಡಿದಲ್ಲಿ ರೂ.1500/- (ರೂ. ಒಂದು ಸಾವಿರದ ಐದುನೂರುಗಳು ಮಾತ್ರ)ವನ್ನು ಹೆಚ್ಚುವರಿ ಪ್ರೋತ್ಸಾಹ ಧನವನ್ನಾಗಿ ನೀಡಲಾಗುವುದು. (ಹಾಲಿ ಎಂ.ಎಫ್.ಎಫ್ ರವರ ಒಪ್ಪಂದದ ಅವಧಿಯಲ್ಲಿ ಸಂಗ್ರಹಿಸಿದ ಬಾಕಿ ಮೊತ್ತಕ್ಕೆ ಯಾವುದೇ ಪ್ರೋತ್ಸಾಹ ಧನ ನೀಡಲಾಗುವುದಿಲ್ಲ).
3. 
   - ಅ) ಎಂ.ಎಫ್.ಎಫ್ ತನ್ನ ವ್ಯಾಪ್ತಿಯಲ್ಲಿನ ಎಲ್ಲಾ ಗ್ರಾಹಕರ ಅಧಿಕ ಭದ್ರತಾ ಠೇವಣಿಯನ್ನು(Additional Security Deposit) ಮೂರು ತಿಂಗಳಲ್ಲಿ ವಸೂಲಿ ಮಾಡಿದಲ್ಲಿ ರೂ. 500/- (ರೂ. ಐದು ನೂರು ಮಾತ್ರ)ವನ್ನು ಹೆಚ್ಚುವರಿ ಪ್ರೋತ್ಸಾಹ ಧನ ನೀಡಲಾಗುವುದು.
   - ಆ) ಎಂ.ಟಿ ವಿಭಾಗ/ಜಾಗೃತದಳದಿಂದ ವಿಧಿಸಿದ ಹಿಂಬಾಕಿ ಶುಲ್ಕ ವಸೂಲಾತಿ ಇತರೆ ಯಾವುದೇ ಪರಿಶೋಧಿತ ಕಡಿಮೆ ಬೇಡಿಕೆ (Audit Short Claim) ಯಿಂದಾಗಿ ವಿಧಿಸಿದ ಹಿಂಬಾಕಿ ಶುಲ್ಕ ವಸೂಲಾತಿ, ಸರ್ಕಾರದ ಹೊಂದಾಣಿಕೆಗಳನ್ನು ಮೈಕ್ರೋ ಫೀಡರ್ ಪ್ರಾಂಚೈಸಿಗೆ ನೀಡಬೇಕಾದ ಪ್ರೋತ್ಸಾಹ ಧನ ಲೆಕ್ಕಾಚಾರಕ್ಕೆ ಪರಿಗಣಿಸಲಾಗುವುದಿಲ್ಲ.
   - ಇ) ಹೆಚ್ಚುವರಿ ಪ್ರೋತ್ಸಾಹ ಧನವನ್ನು ಲೆಕ್ಕಿಸುವಾಗ ಒಪ್ಪಂದದ ಅವಧಿಯಲ್ಲಿ ಸಂಗ್ರಹಿಸಿರುವ ಬಾಕಿಯನ್ನು ಪರಿಗಣಿಸಲಾಗುವುದಿಲ್ಲ.
4. ನೀರಾವರಿ ಪಂಪಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡುವುದಕ್ಕಾಗಿಯೇ ಮೀಸಲಿಟ್ಟ ವಿತರಣಾ ಪರಿವರ್ತಕಗಳ ಮಾಪಕ ಓದುವುದಕ್ಕೆ ಪ್ರತಿ ಸ್ಥಾವರಕ್ಕೆ ರೂ. 25/-(ರೂ. ಇಪ್ಪತ್ತೈದು ರೂಪಾಯಿ ಮಾತ್ರ) ವನ್ನು ಪಾವತಿಸಲಾಗುವುದು.
5. ಕುಡಿಯುವ ನೀರಿನ ಸ್ಥಾವರಗಳು ಮತ್ತು ಬೀದಿ ದೀಪ ಸ್ಥಾವರಗಳ ಮಾಪಕ ಓದುವುದಕ್ಕೆ ಪ್ರತಿ ಸ್ಥಾವರಕ್ಕೆ ರೂ. 25/- (ರೂ. ಇಪ್ಪತ್ತೈದು ರೂಪಾಯಿ ಮಾತ್ರ)ವನ್ನು ಪಾವತಿಸಲಾಗುವುದು.

6. ವಿತರಣಾ ಪರಿವರ್ತಕಗಳಿಗೆ ಮಾಪಕವನ್ನು ಅಳವಡಿಸಿದಲ್ಲಿ, ಕಾರ್ಯ ಸಾಧನೆ ಮಾನದಂಡವನ್ನು (Input Energy) ಆಧಾರದಲ್ಲಿ ಮಾರ್ಪಾಡು ಮಾಡಲಾಗುವುದು. ಈ ನಿಟ್ಟಿನಲ್ಲಿ ಹುವಿಸಕಂನಿಯು ಕಾರ್ಯಸಾಧನೆ ಅಳತೆ ಹಾಗೂ ಪ್ರೋತ್ಸಾಹ/ದಂಡ ನೀಡಲು ಸೂಕ್ತ ವಿಧಾನವನ್ನು ರೂಪಿಸಿ, ಅದರಂತೆ ಪ್ರೋತ್ಸಾಹ ಧನವನ್ನು ನಿಗದಿಪಡಿಸಲಾಗುವುದು.

7. ಮಾಪಕ ಓದುವ ಸಮಯದಲ್ಲಿ ಪತ್ತೆ ಹಚ್ಚುವ ಅನಧಿಕೃತ/ವಿದ್ಯುತ್ ಕಳ್ಳತನದ ಪ್ರಕರಣಗಳನ್ನು ಶಾಕಾಧಿಕಾರಿಯವರಿಗೆ ವರದಿ ಮಾಡಿದಲ್ಲಿ, ರೂ. 150/- (ರೂ. ಒಂದುನೂರಾ ಐವತ್ತು ರೂಪಾಯಿ ಮಾತ್ರ) ವನ್ನು ಪ್ರೋತ್ಸಾಹ ಧನ ನೀಡಲಾಗುವುದು.

8. ಅನಧಿಕೃತ ನೀರಾವರಿ ಪಂಪ್‌ಸೆಟ್ ಗಳು ಹಾಗೂ ಕುಡಿಯುವ ನೀರಿನ ಸ್ಥಾವರಗಳನ್ನು ಸಕ್ರಮಗೊಳಿಸಲು ಸಹಕರಿಸಿದಲ್ಲಿ ಪ್ರತಿ ಸ್ಥಾವರಕ್ಕೆ ರೂ. 100/- (ರೂ. ಒಂದು ನೂರು ರೂಪಾಯಿ ಮಾತ್ರ)ವನ್ನು ಪ್ರೋತ್ಸಾಹ ಧನ ನೀಡಲಾಗುವುದು.

9. ಮೈಕ್ರೋ ಫೀಡರ್ ಫ್ರಾಂಚೈಸಿಯವರಿಗೆ Mobile Cash Collection (MCC) ಮೂಲಕ ಮಾಡುವ ಪ್ರತಿ ವ್ಯವಹಾರಕ್ಕೆ ಕೆಳಗಿನಂತೆ ಹೆಚ್ಚುವರಿ ಪ್ರೋತ್ಸಾಹ ಧನ ನೀಡಲಾಗುವುದು.

    ಅ) ಒಟ್ಟು ಸ್ಥಾವರಗಳಲ್ಲಿ ಶೇ 25 ರಿಂದ ಶೇ 50 ರವರೆಗೆ ನೀಡಿದ ಪ್ರತಿ ರಶೀದಿಗೆ ರೂ.1.00 ರಷ್ಟು.
    ಆ) ಒಟ್ಟು ಸ್ಥಾವರಗಳಲ್ಲಿ ಶೇ 50 ರಿಂದ ಶೇ 75 ರವರೆಗೆ ನೀಡಿದ ಪ್ರತಿ ರಶೀದಿಗೆ ರೂ. 2.00 ರಷ್ಟು.
    ಇ) ಒಟ್ಟು ಸ್ಥಾವರಗಳಲ್ಲಿ ಶೇ 75 ರಿಂದ ಶೇ 90 ರವರೆಗೆ ನೀಡಿದ ಪ್ರತಿ ರಶೀದಿಗೆ ರೂ. 2.50 ರಷ್ಟು
    ಈ) ಒಟ್ಟು ಸ್ಥಾವರಗಳಲ್ಲಿ ಶೇ 90 ರಷ್ಟಿಕ್ಕಿಂತ ಮೇಲ್ಪಟ್ಟು ನೀಡಿದ ಪ್ರತಿ ರಶೀದಿಗೆ ರೂ. 3.00 ರಷ್ಟು ಮೊತ್ತವನ್ನು ಎಂ.ಎಫ್.ಎಫ್.ಗೆ ಪಾವತಿಸಲಾಗುವುದು.

10. ಮೈಕ್ರೋ ಫೀಡರ್ ಫ್ರಾಂಚೈಸಿಯು ತನ್ನ ಮೂಲ ಗ್ರಾಮ ಪಂಚಾಯತಿಯಿಂದ ಬೇರೆ ಗ್ರಾಮ ಪಂಚಾಯತಿ ವ್ಯಾಪ್ತಿಗೆ ವರ್ಗಾವಣೆ ಮಾಡಿದಲ್ಲಿ ರೂ. 3000.00 ಗಳನ್ನು One Time Payment ರೂಪದಲ್ಲಿ ನೀಡಲಾಗುವುದು.

11. ಮೈಕ್ರೋ ಫೀಡರ್ ಫ್ರಾಂಚೈಸಿಯು ಕಾರ್ಯನಿರ್ವಹಿಸುವ ಸಮಯದಲ್ಲಿ, ಮಾರಣಾಂತಿಕವಲ್ಲದ (Non-Fatal) ಅಪಘಾತಕ್ಕೊಳಗಾದರೆ, ಮಾನವೀಯತೆಯ ದೃಷ್ಟಿಯಿಂದ ಗರಿಷ್ಠ ರೂ. 5000/- (ರೂ ಐದು ಸಾವಿರಗಳು ಮಾತ್ರ) ಅಥವಾ ವೈದ್ಯಕೀಯ ವೆಚ್ಚ, ಯಾವುದು ಕಡಿಮೆಯೋ ಆ ಮೊತ್ತವನ್ನು ನೀಡಲಾಗುವುದು. ಒಂದು ವೇಳೆ ಎಂ.ಎಫ್.ಎಫ್ ಕಾರ್ಯನಿರ್ವಹಿಸುವ ಸಮಯದಲ್ಲಿ ಅಪಘಾತದಿಂದ ಮರಣ ಹೊಂದಿದರೆ ರೂ. 2,00,000/-(ರೂ. ಎರಡು ಲಕ್ಷ ಮಾತ್ರ)ಗಳನ್ನು ಪರಿಹಾರವಾಗಿ ನೀಡಲಾಗುವುದು.

## VI. ದಂಡ:-

1. ಮೈಕ್ರೋ ಫೀಡರ್ ಫ್ರಾಂಚೈಸಿಯು ಶೇಕಡಾ 100 ರಷ್ಟು ಬಿಲ್ ವಿತರಿಸದಿದ್ದಲ್ಲಿ ಹಾಗೂ ಕನಿಷ್ಠ ಮೂಲ ವಸೂಲಾತಿ ಗುರಿಯನ್ನು ಸಾಧಿಸದಿದ್ದಲ್ಲಿ ಅವರಿಗೆ ನೀಡುವ ರೂ.12,000/- ಗಳ ಕನಿಷ್ಠ ಖಚಿತ ಪ್ರೋತ್ಸಾಹ ಧನದಲ್ಲಿ ಶೇಕಡಾ 5 ರಷ್ಟನ್ನು ದಂಡದ ರೂಪದಲ್ಲಿ ವಿಧಿಸಿ, ಕಡಿತಗೊಳಿಸಲಾಗುವುದು.
2. ಒಂದು ವೇಳೆ ತಪ್ಪು ರೀಡಿಂಗ್‌ನ್ನು ಸಲ್ಲಿಸಿದ್ದಲ್ಲಿ, ಒಪ್ಪಂದವನ್ನು ರದ್ದುಪಡಿಸಲಾಗುವುದು ಹಾಗೂ ಎಂ.ಎಫ್.ಎಫ್ ರವರನ್ನು ಕಾರ್ಯವಿಮುಕ್ತಿಗೊಳಿಸಲಾಗುವುದು.
3. ಮೈಕ್ರೋ ಫೀಡರ್ ಫ್ರಾಂಚೈಸಿಯು ಬೀದಿ ದೀಪ ಹಾಗೂ ನೀರು ಸರಬರಾಜು ಸ್ಥಾವರಗಳ ಮಾಪಕವನ್ನು ಓದದಿದ್ದಲ್ಲಿ, ಪ್ರತಿ ಸ್ಥಾವರಕ್ಕೆ ರೂ.20/- (ಇಪ್ಪತ್ತು ರೂ. ಗಳು ಮಾತ್ರ) ರ ದಂಡವನ್ನು ವಿಧಿಸಿ ಎಂ.ಎಫ್.ಎಫ್ ಗೆ ನೀಡಬೇಕಾದ ಪ್ರೋತ್ಸಾಹ ಧನದಲ್ಲಿ ಕಡಿತಗೊಳಿಸಲಾಗುವುದು.
4. ಮಾಪಕ ಓದಿದ ಸ್ಥಾವರಗಳ ವಿವರಗಳನ್ನು ಅದೇ ದಿನ ಗಣಕಯಂತ್ರ (Computer) ನಲ್ಲಿ ಅಪ್ಲೋಡ್ ಮಾಡದಿದ್ದಲ್ಲಿ, ಪ್ರತಿ ದಿನಕ್ಕೆ ರೂ.10/- ರ ದಂಡವನ್ನು ವಿಧಿಸಲಾಗುವುದು.
5. ಮಾಪಕ ಓದುವಿಕೆಯನ್ನು ಪ್ರತಿ ತಿಂಗಳ 15 ನೇ ದಿನಾಂಕದೊಳಗೆ ಪೂರ್ಣಗೊಳಿಸದಿದ್ದಲ್ಲಿ, ದಿನಾಂಕ: 16 ರಿಂದ ಪ್ರತಿ ದಿನಕ್ಕೆ ರೂ.100 ರ ದಂಡವನ್ನು ವಿಧಿಸಲಾಗುವುದು.

## VII. ಒಪ್ಪಂದ ನಿವೇದನ ಪತ್ರ ರದ್ದುಪಡಿಸುವಿಕೆ:-

ಆಯ್ಕೆಯಾದ ಎಂ.ಎಫ್.ಎಫ್.ಗಳು ಒಪ್ಪಂದದ ನಿವೇದನ ಪತ್ರದ ಪ್ರಕಾರ ಕಾರ್ಯನಿರ್ವಹಿಸದೇ ಇದ್ದಲ್ಲಿ ಒಪ್ಪಂದವನ್ನು ರದ್ದು ಪಡಿಸಲಾಗುವುದು. ( **ಒಪ್ಪಂದ ನಿವೇದನ ಪತ್ರ ಪ್ರತಿ ಲಗತ್ತಿಸಿದೆ).**

## VIII. ಅರ್ಜಿ ಸಲ್ಲಿಸಲು ಅಭ್ಯರ್ಥಿಗಳಿಗೆ ಸೂಚನೆ:

**ಆಸಕ್ತ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆ ಭರ್ತಿಮಾಡಿ ಈ ಕೆಳಗಿನ ದಾಖಲೆ / ವಿವರಗಳೊಂದಿಗೆ ಅರ್ಜಿಯನ್ನು ಸಲ್ಲಿಸಬೇಕು.**

1) ಅಧೀಕ್ಷಕ ಅಭಿಯಂತರರು(ವಿ) ಕಾ ಮತ್ತು ಪಾ ವೃತ್ತ, ಹುವಿಸಕಂನಿ.,ಶಿರಸಿ ಇವರ ಹೆಸರಿನಲ್ಲಿ ರೂ. 250.00 + 45.00 (18% GST) = Rs. 295.00 ಗಳ ಪಡೆದ ರಾಷ್ಟ್ರೀಕೃತ ಬ್ಯಾಂಕ್‌ನ ಡಿ.ಡಿ. ಯನ್ನು ಶಿರಸಿ ಕೇಂದ್ರ ಸ್ಥಾನದಲ್ಲಿ ಪಾವತಿಯಾಗುವಂತೆ ಲಗತ್ತಿಸುವುದು. [Rs. 295/- D.D Should be issued in the name of Superintending Engineer(Elecl.), O & M Circle, HESCOM, Sirsi.).]. ಯಾವುದೇ ಕಾರಣಕ್ಕೂ ರೂ. 295/-ಗಳನ್ನು ಹಿಂದಿರುಗಿಸಲಾಗುವುದಿಲ್ಲಾ.
2) ಸಂಬಂಧಿಸಿದ ಗ್ರಾಮ ಪಂಚಾಯತಿಯಿಂದ ವಾಸಸ್ಥಾನದ(ರಹವಾಸಿ) ಬಗ್ಗೆ ದೃಢೀಕರಿಸಿದ ಪ್ರಮಾಣ ಪತ್ರ.
3) ವಿದ್ಯಾರ್ಹತೆಯ ಬಗ್ಗೆ ದೃಢೀಕೃತ ದಾಖಲೆಗಳು.
4) ಅಭ್ಯರ್ಥಿಯು ಆಧಾರ ಕಾರ್ಡನ ದೃಢೀಕೃತ ಪ್ರತಿ ಲಗತ್ತಿಸುವುದು.
5) ಜನ್ಮ ದಿನಾಂಕ ಖಚಿತಪಡಿಸಲು ಎಸ್.ಎಸ್.ಎಲ್.ಸಿ ಪ್ರಮಾಣ ಪತ್ರ/ ವರ್ಗಾವಣೆ ಪ್ರಮಾಣ ಪತ್ರದ ದೃಢೀಕೃತ ಪ್ರತಿಗಳು.
6) 2 ಪಾಸ್ ಪೋರ್ಟ ಅಳತೆಯ ಭಾವ ಚಿತ್ರಗಳು.
7) ಯಾವುದೇ ಮುನ್ಸೂಚನೆ ನೀಡದೇ ಈ ಪ್ರಕಟಣೆಯಲ್ಲಿನ ಎಂ.ಎಫ್.ಎಫ್ ನೇಮಕಾತಿಯನ್ನು ರದ್ದು ಪಡಿಸುವ ಹಕ್ಕನ್ನು ಕಾಯ್ದಿರಿಸಿದೆ.
8) ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಮತ್ತು ಮೈಕ್ರೋ ಫೀಡರ್ ಫ್ರಾಂಚೈಸಿ ನಡುವಿನ ನಿವೇದನ ಪತ್ರದಲ್ಲಿನ ಷರತ್ತು /ಒಪ್ಪಂದಗಳ ಇತರೆ ನಿಬಂಧನೆಗಳು ಅನ್ವಯಿಸುತ್ತವೆ. **(ನಿವೇದನೆ ಪತ್ರದ ಪ್ರತಿ ಲಗತ್ತಿಸಿದೆ)**
9) **ಭರ್ತಿಯಾದ ಅರ್ಜಿಗಳನ್ನು ಮೇಲೆ ತಿಳಿಸಲಾದ ದಾಖಲೆಗಳೊಂದಿಗೆ ನೇರವಾಗಿ ಈ ಕೆಳಗಿನ ವಿಳಾಸಕ್ಕೆ ನೋಂದಾಯಿತ ಅಂಚೆ ಮೂಲಕ / Speed Post ಮೂಲಕ / ಮುದ್ದಾಂ ಮೂಲಕ ಕಳುಹಿಸಬೇಕು. ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 16-08-2021 ರ ಸಾಯಂಕಾಲ :4:00 ಘಂಟೆಯ ವರೆಗೆ.**
10) ಕೊನೆಯ ದಿನಾಂಕದ ನಂತರ ತಲುಪಿದ ಹಾಗೂ ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅಂಚೆ ವಿಳಂಬಕ್ಕೆ ಈ ಕಚೇರಿ ಜವಾಬ್ದಾರವಾಗಿರುವುದಿಲ್ಲಾ.

11) ಅರ್ಹ ಅಭ್ಯರ್ಥಿಗಳ ಮೂಲ ದಾಖಲಾತಿಗಳ ಪರಿಶೀಲನೆಗೆ ದಿನಾಂಕ: **19-08-2021** ಬೆಳಿಗ್ಗೆ: **10:00** ಘಂಟೆಗೆ ಈ ಕೆಳಗಿನ ವಿಳಾಸಕ್ಕೆ ಹಾಜರಾಗಲು ತಿಳಿಸಲಾಗುವುದು.

**ಸ್ಥಳ :-**

**ಅಧೀಕ್ಷಕ ಇಂಜಿನೀಯರ್(ವಿ),**
**ಕಾರ್ಯ ಮತ್ತು ಪಾಲನಾ ವೃತ್ತ ಕಛೇರಿ,**
**ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿ.,**
**ಬಿಲ್ಡಿಂಗ್ ಸಂ. # 258/2, ಅಯ್ಯಪ್ಪ ನಗರ, ಹುಬ್ಬಳ್ಳಿ ರಸ್ತೆ,**
**ತಾ॥ ಶಿರಸಿ – 581402 (ಉತ್ತರ ಕನ್ನಡ)**

## IX. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿ ದೊರೆಯುವ ಸ್ಥಳ

www.hescom.karnataka.gov.in ವೆಬ್ ಸೈಟ ಅಥವಾ ಈ ಕಚೇರಿ / ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾ. ಮತ್ತು ಪಾ ವಿಭಾಗ, ಹೆಸ್ಕಾಂ., ಶಿರಸಿ ಹಾಗೂ ದಾಂಡೇಲಿ / ಆಯಾ ತಾಲೂಕು ವ್ಯಾಪ್ತಿಯ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ).

**ಸೂಚನೆ :** ಈ ಪ್ರಕಟಣೆಯಲ್ಲಿನ ಷರತ್ತು / ನಿಬಂಧನೆಗಳಿಗೂ ಹಾಗೂ ಒಪ್ಪಂದದ ನಿವೇದನ ಪತ್ರದ ಷರತ್ತು/ ನಿಬಂಧನೆಗಳಿಗೂ ವ್ಯತ್ಯಾಸ ವಿದ್ದಲ್ಲಿ ಒಪ್ಪಂದ ನಿವೇದನ ಪತ್ರದ ಷರತ್ತುಗಳು ಮೇಲುಗೈ ಸಾಧಿಸುತ್ತವೆ **(prevail).**

## X. ನೋಂದಣಿ ಅಂಚೆ /Speed Post / ಮುದ್ದಾಂ ಮೂಲಕ ಅರ್ಜಿ ಸಲ್ಲಿಸುವ ವಿಳಾಸ:

**ಅಧೀಕ್ಷಕ ಇಂಜಿನೀಯರ್(ವಿ),**
**ಕಾರ್ಯ ಮತ್ತು ಪಾಲನಾ ವೃತ್ತ,**
**ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿ.,**
**ಬಿಲ್ಡಿಂಗ್ ಸಂ. # 258/2, ಅಯ್ಯಪ್ಪ ನಗರ,**
**ಹುಬ್ಬಳ್ಳಿ ರಸ್ತೆ, ತಾ॥ ಶಿರಸಿ – 581402.**
**(ಉತ್ತರ ಕನ್ನಡ)**

Superintending Engineer, Elecl.,
O & M Circle,
Hubli Electricity Supply Company.
Building No. # 258/2, Ayyappa Nagar,
Hubli Road, SIRSI (U.K)
Pin: 581402.

ಅಧೀಕ್ಷಕ ಇಂಜಿನೀಯರ್(ವಿ),
ಕಾರ್ಯ ಮತ್ತು ಪಾಲನಾ ವೃತ್ತ, ಹೆಸ್ಕಾಂ, ಶಿರಸಿ.

1. ಪ್ರತಿಯನ್ನು ಗೌರವಪೂರ್ವಕವಾಗಿ ಮುಖ್ಯ ಇಂಜಿನಿಯರ್(ವಿ), ವಲಯ ಕಛೇರಿ, ಹೆಸ್ಕಾಂ., ಕೇಶ್ವಾಪುರ,ಹುಬ್ಬಳ್ಳಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ಅಭಿನಂದನಾಪೂರ್ವಕವಾಗಿ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ನಿಗಮ ಕಚೇರಿ, ಹೆಸ್ಕಾಂ., ಹುಬ್ಬಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ.
3. ಪ್ರತಿಯನ್ನು ಅಭಿನಂದನಾಪೂರ್ವಕವಾಗಿ ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾಸಅಂ), ನಿಗಮ ಕಚೇರಿ, ಹೆಸ್ಕಾಂ., ಹುಬ್ಬಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ.
4. ಪ್ರತಿಯನ್ನು ಅಭಿನಂದನಾಪೂರ್ವಕವಾಗಿ ಅಧೀಕ್ಷಕ ಇಂಜಿನೀಯರ್(ವಿ) ಮಾಹಿತಿ ತಂತ್ರಜ್ಞಾನ-2, ನಿಗಮ ಕಚೇರಿ, ಹೆಸ್ಕಾಂ., ಹುಬ್ಬಳ್ಳಿ ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಪ್ರತಿಯನ್ನು ಸಾರ್ವಜನಿಕ ಸಂಪರ್ಕಾಧಿಕಾರಿ, ನಿಗಮ ಕಛೇರಿ, ಹೆಸ್ಕಾಂ.,ಹುಬ್ಬಳ್ಳಿ ಇವರ ಮಾಹಿತಿಗಾಗಿ ಕಳುಹಿಸಿದೆ ಹಾಗೂ ಈ ಮೇಲಿನ ವಿಷಯವನ್ನು ದಿನ-ಪತ್ರಿಕೆಯಲ್ಲಿ ಪ್ರಕಟಿಸಲು ಕೋರಿದೆ.
6. ಪ್ರತಿಯನ್ನು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಹೆಸ್ಕಾಂ., ಶಿರಸಿ/ದಾಂಡೇಲಿ/ಕಾರವಾರ ರವರ ಮಾಹಿತಿಗಾಗಿ ವಿವರವಾದ ಪ್ರಕಟಣೆ ಹಾಗೂ ಅರ್ಜಿ ನಮೂನೆಗಳನ್ನು ಲಗತ್ತಿಸಿದೆ. ಪ್ರಕಟಣೆಯು ಪ್ರಕಟವಾದ

7. ತಕ್ಷಣ ವಿವರವಾದ ಪ್ರಕಟಣೆಗಳನ್ನು ಸೂಚನಾ ಫಲಕಕ್ಕೆ ಲಗತ್ತಿಸಿ, ಕೋರಿಕೆದಾರರಿಗೆ ಅರ್ಜಿ ನಮೂನೆಗಳನ್ನು ವಿತರಿಸಲು ಸೂಚಿಸಿದೆ.
8. ಪ್ರತಿಯನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪ-ವಿಭಾಗ, ಹೆಸ್ಕಾಂ., ಯಲ್ಲಾಪುರ/ದಾಂಡೇಲಿ,/ಹಳಿಯಾಳ/ಕಾರವಾರ ರವರ ಮಾಹಿತಿಗಾಗಿ ವಿವರವಾದ ಪ್ರಕಟಣೆ ಹಾಗೂ ಅರ್ಜಿ ನಮೂನೆಗಳನ್ನು ಲಗತ್ತಿಸಿದೆ. ಪ್ರಕಟಣೆಯು ಪ್ರಕಟವಾದ ತಕ್ಷಣ ವಿವರವಾದ ಪ್ರಕಟಣೆಗಳನ್ನು ಸೂಚನಾ ಫಲಕಕ್ಕೆ ಲಗತ್ತಿಸಿ, ಕೋರಿಕೆದಾರರಿಗೆ ಅರ್ಜಿ ನಮೂನೆಗಳನ್ನು ವಿತರಿಸಲು ಸೂಚಿಸಿದೆ.
9. ಕಛೇರಿ ಪ್ರತಿ/ಮಹಾಕಡತ

# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ [ಹೆಸ್ಕಾಂ],

## [“ಮೈಕ್ರೋ ಫೀಡರ್ ಫ್ರಾಂಚೈಸಿ” ಗೊತ್ತು ಮಾಡಿಕೊಳ್ಳುವುದಕ್ಕೆ ಅರ್ಜಿ]

**ಅರ್ಜಿ ಶುಲ್ಕ:** ರೂ. 250.00 + 45.00 (18% GST) = Rs. 295.00

| ಸ್ವಯಂ ದೃಢೀಕೃತ ಪಾಸ್‌ಪೋರ್ಟ ಅಳತೆಯ ಭಾವಚಿತ್ರ ಲಗತ್ತಿಸುವುದು |
|---|

1. ಹೆಸರು :______________________
2. ವಿದ್ಯಾರ್ಹತೆ :______________________
   - ಪಿ.ಯು.ಸಿ/ತತ್ಸಮಾನ ವಿದ್ಯಾರ್ಹತೆಯ ಸರಾಸರಿ ಅಂಕಗಳು :______________________
3. ಜನ್ಮ ದಿನಾಂಕ :______________________
4. ವಾಸಸ್ಥಳದ ಪೂರ್ಣ ವಿಳಾಸ :______________________
   :______________________
   :______________________
5. ಅನುಭವ :______________________
6. ಯಾವ ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸಲಾಗಿದೆ :______________________
7. ಅರ್ಜಿ ಶುಲ್ಕನ್ನು ಪಾವತಿಸಿದ ವಿವರ ______________________
   - ಬ್ಯಾಂಕ್ ಹೆಸರು :______________________
   - ಡಿ.ಡಿ. ಮೊತ್ತ :______________________
   - ಡಿ.ಡಿ. ಸಂಖ್ಯೆ/ ದಿನಾಂಕ :______________________
8. ಮೊಬೈಲ್ ಸಂಖ್ಯೆ: :______________________
   ಲ್ಯಾಂಡ ಫೋನ್ ಸಂಖ್ಯೆ :______________________
   ಈ–ಮೇಲ್ ಐಡಿ: :______________________

“ಮೇಲೆ ನಮೂದಿಸಿದ ವಿಷಯಗಳು ನನಗೆ ತಿಳಿದ ಮಟ್ಟಿಗೆ ನಿಜವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ. ಒಂದು ವೇಳೆ ಮೈಕ್ರೋ ಫೀಡರ್ ಫ್ರಾಂಚೈಸಿಯಾಗಿ ಆಯ್ಕೆಯಾದಲ್ಲಿ ನಾನು ದಿನನಿತ್ಯ ವಸೂಲು ಮಾಡುತ್ತಿರುವ ಕಂದಾಯ ವಸೂಲಾತಿ ಪ್ರಮಾಣ ಆಧರಿಸಿ, ಬ್ಯಾಂಕ್ ಖಾತರಿ ಹಣವನ್ನು ಕನಿಷ್ಠ ರೂ. 50000.00 (ರೂ. ಐವತ್ತು ಸಾವಿರ ಮಾತ್ರ) ಅಥವಾ ಗರಿಷ್ಟ 5 ದಿನಗಳ ತಿಂಗಳಿನ ನಿತ್ಯ ಸರಾಸರಿ ಕಂದಾಯ ವಸೂಲಾತಿ ಪ್ರಮಾಣ, ಇವೆರಡರಲ್ಲಿ ಯಾವುದು ಹೆಚ್ಚಿರುವುದೋ, ಅದಕ್ಕೆ ಸಮನಾಗಿ ಬ್ಯಾಂಕ ಖಾತರಿ ಹಣವನ್ನು ನೀಡಲು ಒಪ್ಪಿರುತ್ತೇನೆ”.

ಸ್ಥಳ : ಅಭ್ಯರ್ಥಿಯ ಸಹಿ :

ದಿನಾಂಕ : ಅಭ್ಯರ್ಥಿಯ ಹೆಸರು:

**ಅಭ್ಯರ್ಥಿಗಳಿಗೆ ಸೂಚನೆ :-**

1. ಇದು ಹು.ವಿ.ಸ.ಕಂ.ನಲ್ಲಿ ಉದ್ಯೋಗ/ ನೌಕರಿ/ ಕೆಲಸದ/ ನೇಮಕಾತಿಯ ಅರ್ಜಿ ಅಲ್ಲ. ಅರ್ಜಿಯ ಜೊತೆಗೆ ಗ್ರಾಮ ಪಂಚಾಯಿತಿಯ ಹದ್ದಿನಲ್ಲಿ [ವ್ಯಾಪ್ತಿಯಲ್ಲಿ] ವಾಸವಾದ, ವಯಸ್ಸಿನ, ವಿದ್ಯಾರ್ಹತೆಯ, ಅನುಭವದ ಬಗೆಗೆ ಮೂಲ ಪ್ರಮಾಣಿತ ದಸ್ತಾವೇಜುಗಳನ್ನು ಅರ್ಜಿಯ ಜೊತೆಗೆ ಲಗತ್ತಿಸಬಾರದು. ಅರ್ಜಿಯ ಜೊತೆಗೆ ಲಗತ್ತಿಸಿದ **ಮೂಲ ದಸ್ತಾವೇಜುಗಳಿಗೆ ಹು.ವಿ.ಸ.ಕಂಪನಿಯು ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ.** ಇತ್ತೀಚಿನ ಸ್ವಯಂ ದೃಢೀಕೃತ **ಪಾಸ್‌ಪೋರ್ಟ್** ಅಳತೆಯ ಫೋಟೋವನ್ನು ಈ ಅರ್ಜಿಗೆ ಅಂಟಿಸಬೇಕು. ಅಭ್ಯರ್ಥಿಯು ದಿನಾಂಕ: 19.08.2021 ರಂದು ಪರಿಶೀಲನೆಗಾಗಿ ಮೂಲ ಪ್ರತಿಗಳನ್ನು ಹಾಜರುಪಡಿಸಬೇಕು.
2. ಸಂಪೂರ್ಣ ಮಾಹಿತಿಯು ಹು.ವಿ.ಸ.ಕಂಪನಿಯ ವೆಬ್ ಸೈಟ್‌ನಲ್ಲಿ [www.hescom.karnataka.gov.in] ಹಾಗೂ ಅಧೀಕ್ಷಕ ಇಂಜಿನೀಯರ್(ವಿ),ಕಾ ಮತ್ತು ಪಾ ವೃತ್ತ, ಹೆಸ್ಕಾಂ., ಶಿರಸಿ / ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾ ಮತ್ತು ಪಾ ವಿಭಾಗ, ಹೆಸ್ಕಾಂ., ಶಿರಸಿ ಹಾಗೂ ದಾಂಡೇಲಿ / ಆಯಾ ತಾಲೂಕು ವ್ಯಾಪ್ತಿಯ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ರವರ ಕಚೇರಿಗಳಲ್ಲಿ ಲಭ್ಯವಿರುತ್ತದೆ.

**ಅರ್ಜಿಯೊಂದಿಗೆ ಲಗತ್ತಿಸಬೇಕಾದ ಸ್ವದೃಢೀಕೃತ ಪ್ರಮಾಣ ಪತ್ರಗಳು [self attested] :**
**[ದಿನಾಂಕ: 19.08.2021 ರಂದು ಮೂಲ ದಾಖಲೆಗಳನ್ನು ಪರಿಶೀಲಿಸಲಾಗುವುದು.]**

1) ಸಂಬಂಧಿಸಿದ ಗ್ರಾಮ ಪಂಚಾಯತಿಯಿಂದ ವಾಸಸ್ಥಾನದ(ರಹವಾಸಿ) ಬಗ್ಗೆ ದೃಢೀಕರಿಸಿದ ಪ್ರಮಾಣ ಪತ್ರ.
2) ವಿದ್ಯಾರ್ಹತೆಯ ಬಗ್ಗೆ ದೃಢೀಕೃತ ದಾಖಲೆಗಳು.
3) ಅಭ್ಯರ್ಥಿಯು ಆಧಾರ ಕಾರ್ಡನ ದೃಢೀಕೃತ ಪ್ರತಿ ಲಗತ್ತಿಸುವುದು.
4) ಜನ್ಮ ದಿನಾಂಕ ಖಚಿತಪಡಿಸಲು ಎಸ್.ಎಸ್.ಎಲ್.ಸಿ ಪ್ರಮಾಣ ಪತ್ರ/ ವರ್ಗಾವಣೆ ಪ್ರಮಾಣ ಪತ್ರದ ದೃಢೀಕೃತ ಪ್ರತಿಗಳು.
5) 2 ಪಾಸ್ ಪೋರ್ಟ ಅಳತೆಯ ಭಾವ ಚಿತ್ರಗಳು.
6) ಅಧೀಕ್ಷಕ ಅಭಿಯಂತರರು(ವಿ) ಕಾ ಮತ್ತು ಪಾ ವೃತ್ತ, ಹುವಿಸಕಂನಿ.,ಶಿರಸಿ ಇವರ ಹೆಸರಿನಲ್ಲಿ ಪಡೆದ ರೂ. 250.00 + 45.00 (18% GST) = Rs. 295.00 ಗಳ ರಾಷ್ಟ್ರೀಕೃತ ಬ್ಯಾಂಕ್‌ನ ಡಿ.ಡಿ.ಯನ್ನು ಶಿರಸಿ ಕೇಂದ್ರ ಸ್ಥಾನದಲ್ಲಿ ಪಾವತಿಯಾಗುವಂತೆ ಲಗತ್ತಿಸುವುದು. [Rs. 295/- D.D Should be issued in the name of Superintending Engineer(Elecl.), O & M Circle, HESCOM, Sirsi.).]. ಯಾವುದೇ ಕಾರಣಕ್ಕೂ ರೂ. 295/-ಗಳನ್ನು ಹಿಂದಿರುಗಿಸಲಾಗುವುದಿಲ್ಲಾ.